**D**

**CCE PR**
**UNREVISED**


**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**


**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 27. 06. 2019 ] ಸಂಕೇತ ಸಂಖ್ಯೆ : **33-K**

Date : 27. 06. 2019 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ? | |
| | ***ಉತ್ತರ :*** | |
| | ಗಿಳಿಯ ತತ್ತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು ? | |
| | ***ಉತ್ತರ :*** | |
| | ವಿಷದ ಬಾಣವು ಮರಕ್ಕೆ ತಗುಲಿದ್ದರ ಪರಿಣಾಮವಾಗಿ ಮರವು ಒಣಗಿ ನಿಂತಿತು. | |
| 3. | ಕ್ರಿಕೆಟ್ ಆಟದ ಬಗ್ಗೆ ಇರುವ ಅಪವಾದವೇನು ? | |
| | ***ಉತ್ತರ :*** | |
| | ಮಾನವ ಶ್ರಮ ವ್ಯರ್ಥವಾಗುವಿಕೆಯು ಕ್ರಿಕೆಟ್ ಆಟದ ಬಗ್ಗೆ ಇರುವ ಅಪವಾದವಾಗಿದೆ. | |
| 4. | ಭಾರತೀಯ ಸಂಗೀತದ ಎರಡು ಶೈಲಿಗಳು ಯಾವುವು ? | |
| | ***ಉತ್ತರ :*** | |
| | ಹಿಂದೂಸ್ಥಾನಿ ಸಂಗೀತ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತಗಳು ಭಾರತೀಯ ಸಂಗೀತದ ಎರಡು ಶೈಲಿಗಳು. | |
| 5. | ಪುನರ್ಜನ್ಮವಿದ್ದುದೇ ಆಗಿದ್ದಲ್ಲಿ ಪುಟ್ಟರಾಜರ ಬಯಕೆ ಏನಾಗಿತ್ತು ? | |
| | ***ಉತ್ತರ :*** | |
| | ಪುನರ್ಜನ್ಮವಿದ್ದುದೇ ಆಗಿದ್ದಲ್ಲಿ ಕುರುಡನಾಗಿ ಹುಟ್ಟುವುದು ಪುಟ್ಟರಾಜರ ಬಯಕೆಯಾಗಿತ್ತು. | |
| 6. | ಪುಟ್ಟರಾಜರ ಹಿಂದಿ ಭಾಷೆಯ ಪ್ರಾವೀಣ್ಯತೆಗೆ ಸಾಕ್ಷಿ ಯಾವುದು ? | |
| | ***ಉತ್ತರ :*** | |
| | ಕನ್ನಡ ಮತ್ತು ಸಂಸ್ಕೃತದ ಕೃತಿಗಳನ್ನು ಹಿಂದಿ ಭಾಷೆಗೆ ಅನುವಾದಿಸಿದ್ದು ಪುಟ್ಟರಾಜರ ಹಿಂದಿ ಭಾಷೆಯ ಪ್ರಾವೀಣ್ಯಕ್ಕೆ ಸಾಕ್ಷಿಯಾಗಿದೆ. | |
| 7. | ಲೇಖಕರ ಅಜ್ಜ ಯಾವ ವೃತ್ತಿಯಲ್ಲಿದ್ದರು ? | |
| | ***ಉತ್ತರ :*** | |
| | ಲೇಖಕರ ಅಜ್ಜ ಶಿಕ್ಷಕ ವೃತ್ತಿಯಲ್ಲಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಅಜ್ಜ ಅಕ್ಕಿಯನ್ನು ತೆಗೆದುಕೊಂಡು ಹೋದದ್ದು ಹೇಗೆ ?<br>***ಉತ್ತರ :***<br>ಅಜ್ಜ ಅಕ್ಕಿಯನ್ನು ಹಾಸಿಗಿಯಲ್ಲಿ ಇಟ್ಟು ಸುರಳಿ ಸುತ್ತಿ ತೆಗೆದುಕೊಂಡು ಹೋದರು. | |
| 9. | ಅರಿವು ಪದ್ಯದಲ್ಲಿ ಮೈ ಹಣ್ಣಾಗಲು ಕಾರಣವೇನೆಂದು ಹೇಳಿದ್ದಾರೆ ?<br>***ಉತ್ತರ :***<br>ಅರಿವು ಪದ್ಯದಲ್ಲಿ ಮಹಾಮನೆಯ ನಿತ್ಯ ದಾಸೋಹಕ್ಕೆ ಬೇಯಿಸಿ ಬಡಿಸುವುದು ಮೈ ಹಣ್ಣಾಗಲು ಕಾರಣವೆಂದು ಹೇಳಿದ್ದಾರೆ. | |
| 10. | ಇಬ್ಬನಿ ಮಾಯವಾಗುವುದು ಹೇಗೆ ?<br>***ಉತ್ತರ :***<br>ಸೂರ್ಯನ ಕಿರಣಗಳಿಗೆ ಇಬ್ಬನಿ ಮಾಯವಾಗುವುದು. | |
| 11. | ಯಾವುದಕ್ಕಾಗಿ ಹಗಲಿರುಳು ಹೋರಾಡಬೇಕೆಂದು 'ಗುರಿ' ಪದ್ಯದಲ್ಲಿ ಕವಿ ಹೇಳಿದ್ದಾರೆ ?<br>***ಉತ್ತರ :***<br>ಒಂದೇ ಹೆಗ್ಗುರಿಯ ಸಾಧನೆಗಾಗಿ ಹಗಲಿರಳು ಹೋರಾಡಬೇಕೆಂದು 'ಗುರಿ' ಪದ್ಯದಲ್ಲಿ ಕವಿ ಹೇಳಿದ್ದಾರೆ. | |
| 12. | ಮಕ್ಕಳ ಹಸಿವನ್ನು ಬಲ್ಲವರು ಯಾರು ?<br>***ಉತ್ತರ :***<br>ಮಕ್ಕಳ ಹಸಿವನ್ನು ಬಲ್ಲವರು ತಾಯಿ (ಅಮ್ಮ). | |
| 13. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ. | |
| 14. | ವೇಷಧರಿಸಿದ ಮೇಲೆ ಹೇಗಿರಬೇಕೆಂದು ಸೊನ್ನಲಿಗೆಯ ಸಿದ್ಧರಾಮ ಹೇಳಿದ್ದಾರೆ ?<br>***ಉತ್ತರ :***<br>ವೇಷಧರಿಸಿದ ಮೇಲೆ ವೇಷದಂತೆ ಆಚರಣೆ ಇರಬೇಕೆಂದು ಸೊನ್ನಲಿಗೆಯ ಸಿದ್ಧರಾಮ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | 15 × 2 = 30 |
| 15. | ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?<br>*ಉತ್ತರ :*<br>ಹಲವಾರು ವರ್ಷಗಳಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ಹಸಿರು ಬಣ್ಣಗಳಿಂದ ಮನಸ್ಸಿಗೆ ಮುದ ನೀಡಿದೆ. ಆದರೆ ಈಗ ದುರದೃಷ್ಟದಿಂದ ಮರವನ್ನು ರೋಗ ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ನಾನು ಮರವನ್ನು ಬಿಟ್ಟು ಹೋಗುವುದಿಲ್ಲ ಎಂದು ಗಿಳಿಯು ಸಮರ್ಥನೆ ನೀಡಿತು. | |
| 16. | ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?<br>*ಉತ್ತರ :*<br>ಒಂದು ಉತ್ತಮ ಎಸೆತವು ಎಂತಹ ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು. ಆದರೆ ದ್ರಾವಿಡರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್‌ಗಳನ್ನು ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ, ದಿನವಿಡೀ ಕ್ರೀಸ್‌ನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು. ಇದೇ ದ್ರಾವಿಡ್‌ರನ್ನು ಗೋಡೆ ಎಂದು ಕರೆಯಲು ಕಾರಣವಾಗಿದೆ. | |
| 17. | ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರ ಯಾವುದು ?<br>*ಉತ್ತರ :*<br>ತಲೆಯ ಮೇಲೊಂದು ಅಂದವಾಗಿ ಶಿಸ್ತಿನಿಂದ ಸುತ್ತಿದ ಕಾವಿ ಬಣ್ಣದ ಪಟಗಾ, ಹಣೆಯಲ್ಲಿ ಸದಾ ಎದ್ದು ಕಾಣುವ ವಿಭೂತಿ, ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿಮಾಲೆ, ಕೊಂಚವೇ ಬಾಗಿದ ಕತ್ತು, ಕೈಯಲ್ಲೊಂದು ಊರುಗೋಲು. ಇವು ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದುದರ ಪರಿಣಾಮವೇನು ?<br>***ಉತ್ತರ :***<br>ಇದ್ದಕ್ಕಿದ್ದಂತೆಯೆ ವಿದ್ಯುತ್ ಕಡಿತ ಉಂಟಾಗುವುದು, ಹವಾಮಾನದ ಏರುಪೇರು, ಅತಿವೃಷ್ಟಿ, ಭೂಕುಸಿತ, ಪ್ರವಾಹ ಪೀಡೆ, ಕುಡಿಯುವ ನೀರಿನ ಅಭಾವ, ಸಾಂಕ್ರಾಮಿಕ ರೋಗ ಈ ಎಲ್ಲಾ ಅಧ್ವಾನಗಳು ಪಶ್ಚಿಮ ಘಟ್ಟಗಳನ್ನು ದೋಚಿದ್ದರ ಪರಿಣಾಮವಾಗಿದೆ. | |
| 19. | ಪಶ್ಚಿಮ ಘಟ್ಟಗಳು ಯಾವುದರ ಗುಡಾಣವಾಗಿವೆ ?<br>***ಉತ್ತರ :***<br>ದಟ್ಟಕಾಡು, ಗೊಂಡಾರಣ್ಯ, ಜೇನು, ಜೀರುಂಡೆ, ಕೀಟ, ಪತಂಗಗಳಿಂದ ಹಿಡಿದು ಕಾಡೆಮ್ಮೆ, ಮದ್ದಾನೆಗಳವರೆಗೂ ಅಸಂಖ್ಯ ಜೀವಕೋಟಿಗಳ ಆಶ್ರಯ ತಾಣ ಧುಮ್ಮಿಕ್ಕುವ ಜಲಪಾತ, ಬಿಸಿ ನೀರಿನ ಬುಗ ಹಿಮಶೀತಲ ಸರೋವರ, ಸೂಜಿಮೊನೆಯಂಥ ಶಿಖರ, ದುರ್ಗಮ ಪ್ರಪಾತ ಮುಂತಾದ ಉಬ್ಬುತಗ್ಗಿನ ವೈಚಿತ್ರ್ಯಗಳ ಗುಡಾಣವಾಗಿ ಪಶ್ಚಿಮ ಘಟ್ಟಗಳಿವೆ. | |
| 20. | ಪಶ್ಚಿಮ ಘಟ್ಟಗಳ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಹೇಗೆ ಸಹಕಾರಿಯಾಗಿವೆ ?<br>***ಉತ್ತರ :***<br>ನಾವು ವಿದ್ಯುತ್ ಪಡೆಯುವುದು ಪಶ್ಚಿಮ ಘಟ್ಟಗಳ ನದಿಗಳಿಂದಾಗಿದೆ. ಪಶ್ಚಿಮ ಘಟ್ಟಸಾಲುಗಳಿಂದ ಮಳೆ ಹಾಗೂ ತೇವ ತುಂಬಿದ ಗಾಳಿ ಬೀಸುತ್ತದೆ. ನಾವು ಬಳಸುವ ಕಾಫಿ, ಅಡಿಕೆ, ಏಲಕ್ಕಿ, ಲವಂಗ ಇವೆಲ್ಲ ಪಶ್ಚಿಮ ಘಟ್ಟಗಳ ಉತ್ಪನ್ನಗಳು. ಸ್ಟೀಲ್ ಲೋಟದಂತಹ ವಸ್ತುಗಳನ್ನು ತಯಾರಿಸುವ ಖನಿಜ, ವಿವಿಧ ಪರಿಕರಗಳ ತಯಾರಿಕೆಗೆ ಬೇಕಾದ ಬಿದಿರು, ಬೆತ್ತ ಇವೆಲ್ಲ ಪಶ್ಚಿಮ ಘಟ್ಟಗಳ ಉತ್ಪನ್ನಗಳಾಗಿದ್ದು ನಮ್ಮ ದಿನನಿತ್ಯದ ಬದುಕಿಗೆ ಸಹಕಾರಿಯಾಗಿವೆ. | |
| 21. | ತಾಯಿಯು ಜೊತೆಗಿದ್ದರೆ ಬನವೇ ಸೊಗಸು ಎಂದು ಮಗನಿಗನಿಸಿದ್ದು ಏಕೆ ?<br>***ಉತ್ತರ :***<br>ಬನದಲ್ಲಿ ಕೇದಿಗೆ, ಸಂಪಿಗೆ ಮುಂತಾದ ಹೂಗಳು ಅರಳಿ ನಿಂತಿರುತ್ತವೆ. ಇವು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತವೆ. ಇಂಪಾದ ಗಾನ, ತಂಗಾಳಿ, ಸೂರ್ಯದೇವನ ಹೊಂಬೆಳಕು, ಹುಲ್ಲಿನ ಮೇಲಿನ ಹಿಮಮಣಿಗಳು ಮಿರುಗುವುದನ್ನು ಮಗ ನೋಡಿ ಆನಂದಪಡುತ್ತಾನೆ. ಈ ಸಮಯದಲ್ಲಿ ತಾಯಿ ಜೊತೆಗಿದ್ದರೆ ಮನೆಗಿಂತ ಬನವೇ ಸೊಗಸು ಎಂದು ಮಗನಿಗೆ ಅನ್ನಿಸುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಅಂತರಾತ್ಮವು ಯಾವಾಗ ಕಿರುಚಿಕೊಳ್ಳುತ್ತದೆ ?<br>*ಉತ್ತರ :*<br>ಹೆಣ್ಣೊಬ್ಬಳು ಮಹಾಮನೆಯ ನಿತ್ಯದಾಸೋಹಕ್ಕೆ ಬೇಯಿಸಿ, ಬಡಿಸಿ ಸೋತು ಸುಣ್ಣವಾಗಿ ಹೊದ್ದು ಮಲಗುತ್ತಾಳೆ. ಇದ್ದಕ್ಕಿದ್ದಂತೆ ಏನೋ ಕಳೆದುಕೊಂಡಂತಾಗಿ ತನ್ನ ಇರುವಿಕೆಯ ಅರಿವಾಗದೆ ಗಾಬರಿಯಾಗುತ್ತಾಳೆ. ಹಾಗಾದರೆ ನಾನಿಲ್ಲವೇ ? ಇದ್ದೀ, ನೀನು ಇದ್ದೀ ನೀನು ಇರಬೇಕು ಎಂದು ಆಗ ಅಂತರಾತ್ಮ ಚೀರಿಕೊಳ್ಳುತ್ತದೆ. | |
| 23. | ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?<br>*ಉತ್ತರ :*<br>ಕವಿ ಸಿ.ಪಿ.ಕೆ.ಯವರು ಸದ್ದು ಮಾಡದಿರು ಪದ್ಯದಲ್ಲಿ ಕರ್ತವ್ಯದ ಬಗ್ಗೆ ಹೇಳಿದ್ದಾರೆ. ಸದ್ದುಗದ್ದಲ ಮಾಡದಂತೆ ತಟ್ಟೆಯೊಳು ಕರ್ಪೂರ ಮೌನದಲಿ ಕರಗುವಂತೆ ಹಾಗೂ ದೀಪದೆದುರಿಗೆ ಕತ್ತಲು ಸರಿಯುವಂತೆ ಶಾಂತಿಯಲಿ ಬದುಕಿ ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಮಾಡಬೇಕೆನ್ನುತ್ತಾರೆ. | |
| 24. | ಬದುಕಿನಲ್ಲಿ ಒಂದು ಹೆಗ್ಗುರಿಯನ್ನು ಇರಿಸಿಕೊಳ್ಳಬೇಕು ಏಕೆ ?<br>*ಉತ್ತರ :*<br>ಒಂದು ಬಾಣಕ್ಕೆ ಗುರಿಯು ಹಲವಿರುವುದಿಲ್ಲ, ಒಂದೇ ಇರುತ್ತದೆ. ದೇಹದಲ್ಲಿ ಆತ್ಮ ಎರಡಿರುವುದಿಲ್ಲ, ಒಂದೇ ಇರುತ್ತದೆ. ಆದ್ದರಿಂದ ಜೀವನದಲ್ಲಿ ಹಲವು ಗುರಿ ಇಟ್ಟುಕೊಳ್ಳದೆ ಹಗಲಿರುಳು ಹೋರಾಡಿ ಬದುಕಿನಲ್ಲಿ ಸಾಧನೆ ಮಾಡಲು ಸಾಧ್ಯವಾಗುವುದರಿಂದ ಒಂದೇ ಹೆಗ್ಗುರಿಯನ್ನು ಇರಿಸಿಕೊಳ್ಳಬೇಕು. | |
| 25. | ಕಂದಯ್ಯ ಅತ್ತರೆ ಆಗುವ ಅಚ್ಚರಿಗಳೇನು ?<br>*ಉತ್ತರ :*<br>ಜನಪದರು ಮಗುವಿನ ಬಗೆಗೆ ನವಿರಾಗಿ ತಮ್ಮ ನುಡಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಕಂದಯ್ಯ ಅತ್ತರೆ ಕಣಗಿಲೆ ಹೂವಿನಗಿಡ ಚಿಗುರುತ್ತದೆ. ಒಣಗಿದ್ದ ಬಾಳೆಮರ ಚಿಗುರುತ್ತದೆ. ಬರಡಾದ ಆಕಳುಗಳು ಹಾಲು ಕೊಡುತ್ತವೆ. ಇವು ಜನಪದರ ಪ್ರಕಾರ ಕಂದಯ್ಯ ಅತ್ತರೆ ಆಗುವ ಅಚ್ಚರಿಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದೆ ತನಗೆ ಫಲವಿಲ್ಲ ಎಂದು ಅಕ್ಕ ಹೇಳುವಾಗ ನೀಡುವ ಉದಾಹರಣೆಗಳಾವುವು ? | |
| | *ಉತ್ತರ :* | |
| | ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದೆ ತನಗೆ ಫಲವಿಲ್ಲ ಎಂದು ಅಕ್ಕ ಹೇಳಿದ್ದಾರೆ. ಮರವಿದ್ದು ನೆರಳಿಲ್ಲದಿದ್ದರೆ, ಧನವಿದ್ದು ದಯೆ ಇಲ್ಲದಿದ್ದರೆ, ಹಸುವಿದ್ದು ಹಾಲಿಲ್ಲದಿದ್ದರೆ, ರೂಪಿದ್ದು ಗುಣವಿಲ್ಲದಿದ್ದರೆ ಹೀಗೆಯೇ ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದಿದ್ದರೆ ತಾನಿದ್ದು ಫಲವಿಲ್ಲ ಎಂದು ಈ ಉದಾಹರಣೆಗಳೊಂದಿಗೆ ಅಕ್ಕ ಹೇಳಿದ್ದಾಳೆ. | |
| 27. | ಯುದ್ಧವನ್ನು ಮಾಡದೆ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು ? | |
| | *ಉತ್ತರ :* | |
| | ಯುದ್ಧ ಮಾಡಿ ಗೆದ್ದು ಇಂದ್ರ ಪದವಿ ಹಾಗೂ ಸುರರ ಸತಿಯನ್ನು ಪಡೆಯುವ ಬದಲು ಇಲ್ಲೇ ಸುಖಪಡಬಹುದು. ದೇವ ಲೋಕದ ಸ್ತ್ರೀಯರು ಬೇಡ, ನಮ್ಮ ಅರಮನೆಯಲ್ಲಿ ನಾರಿಯರಿದ್ದಾರೆ. ಇಂದ್ರ ಪದವಿ ಬೇಡ ನಮ್ಮ ಅರಸುತನವೇ ಸಾಕು. ಇವುಗಳಿಂದಲೇ ನಾನು ಯುದ್ಧವನ್ನು ಮಾಡದೆ ಸುಖಪಡಬಹುದೆಂದು ಸಮರ್ಥಿಸಿದನು. | |
| 28. | ಜೋಯಿಸರ ಮಾತು ಯಾವಾಗ ವೇದವಾಕ್ಯವಾಗುತ್ತಿತ್ತು ? | |
| | *ಉತ್ತರ :* | |
| | ಜೋಯಿಸರ ಮನೆಯಲ್ಲಿ ಎರಡೋ ಮೂರೋ ತಲೆಮಾರುಗಳಷ್ಟು ಹಳೆಯದಾದ ಕುರ್ಚಿ ಇತ್ತು. ಈ ಹಳೆಯದಾದ ಕುರ್ಚಿಯಲ್ಲಿ ಕುಳಿತು ಜೋಯಿಸರು ಒಂದು ಮಾತು ಹೇಳಿದರೆಂದರೆ ಕುಂದಾಪುರದಿಂದ ಶೃಂಗೇರಿಯವರೆಗಿನ ಆಸ್ತಿಕರಿಗೆಲ್ಲ ಅವರ ಮಾತು ವೇದವಾಕ್ಯವಾಗುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಅನನುಭವಿ ಸಾವಿತ್ರಿ ಮೊದಲ ಬಾರಿ ಗಂಡನ ಮನೆಯಲ್ಲಿ ಅಡುಗೆ ಮಾಡಿದ್ದು ಹೇಗೆ ?<br>***ಉತ್ತರ :***<br>ಅನುನುಭವಿ ಸಾವಿತ್ರಿಗೆ ಮೊದಲ ಬಾರಿ ಗಂಡನ ಮನೆಯಲ್ಲಿ ಅಡುಗೆ ಮನೆ ಸಾಮ್ರಾಜ್ಯ ಕೈಗೆ ಸಿಗುತ್ತದೆ. ತೊಗರಿ–ಕಡಲೆಯ ಮಧ್ಯ ವ್ಯತ್ಯಾಸ ಗೊತ್ತಿರದ ಸಾವಿತ್ರಿ ಹಳ್ಳಿಮನೆ ಅಂಗಳದಲ್ಲಿ ಬೆಳೆದ ಸೌತೆ ಮುಂತಾದ ತರಕಾರಿ ತಂದು ಅವಳ ಅಮ್ಮನಿಗೆ ದೂರವಾಣಿ ಕರೆಮಾಡಿ ಉಪ್ಪು ಹುಳಿ ಎಷ್ಟೆಂದು ಕೇಳಿ ಬರೆದುಕೊಂಡು ಅಡುಗೆ ಮಾಡುತ್ತಾಳೆ. | |
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ಯುಗದ ಹಿಂದಿನ ..................................................<br>....................................................................<br>....................................................................<br>............................................. ತುಂಬ ಸವಿಚೈತ್ರವು.<br>**ಅಥವಾ**<br>ಕೊರಡ ಕೊನರಿಸಿ ..................................................<br>....................................................................<br>....................................................................<br>............................................. ಕಲರವಕೆ ಮತ್ತೇರಿದೆ.<br>***ಉತ್ತರ :***<br>ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು.<br>**ಅಥವಾ**<br>ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ. | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ಬಿ.ಪಿ. ರಾಧಾಕೃಷ್ಣ :*<br>***ಉತ್ತರ :***<br>ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣರವರು ಬೆಂಗಳೂರಿನಲ್ಲಿ ೧೯೧೮ ರಲ್ಲಿ ಜನಿಸಿದರು. ಬಿ.ಎಸ್‌ಸಿ. ಆನರ್ಸ್ ಪದವೀಧರರು. ಇವರು ಸಿ.ವಿ. ರಾಮನ್, ಚಾರ್ಲ್ಸ್ ಡಾರ್ವಿನ್, ಐನ್‌ಸ್ಟೀನ್, ರಾಮಾನುಜಂ, ಮೇರಿಕ್ಯೂರಿ ಮುಂತಾದವರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯಸೇವೆಗಾಗಿ ಎರಡು ಬಾರಿ ಸಾಹಿತ್ಯ ಅಕಾಡಮಿ ಪ್ರಶಸ್ತಿ, ೧೯೯೧ ರಲ್ಲಿ ಪದ್ಮಶ್ರೀ ಪ್ರಶಸ್ತಿ ಮತ್ತು ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ. | |
| 32. | *ಸು.ರಂ. ಎಕ್ಕುಂಡಿ :*<br>***ಉತ್ತರ :***<br>ಸುಬ್ಬಣ್ಣ ರಂಗನಾಥ ಎಕ್ಕುಂಡಿ ಇವರು ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ ೧೯೨೩ ರಲ್ಲಿ ಜನಿಸಿದರು. ಇವರು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖರಲ್ಲೊಬ್ಬರು. ಆನಂದ ತೀರ್ಥ, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಕಥನ ಕವನಗಳು, ಬಕುಳದ ಹೂವುಗಳು ಇವರು ಬರೆದ ಕೃತಿಗಳಾಗಿವೆ. ಇವರಿಗೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ರಾಜ್ಯ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ಲಭಿಸಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 4 × 3 = 12 |
| | ಕೃತಿ, ಕರ್ತೃ, ಪದ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ಅವತ್ತು ನೀವು ಹಾಂಗ ಮಾಡದಿದ್ರ ನಾನು ಇನ್ನೂ ಕಸಾಗುಡಿಸ್ತಾನೇ ಇರತ್ತಿದ್ದೆ."<br><br>***ಉತ್ತರ :***<br><br>ಈ ವಾಕ್ಯವನ್ನು ಡಾ. ಗುರುರಾಜ ಕರಜಗಿಯವರು ಬರೆದ 'ಕರುಣಾಳು ಬಾ ಬೆಳಕೆ' ಭಾಗ ಮೂರು. ಈ ಕೃತಿಯಿಂದ ಆಯ್ದು 'ಎಲ್ಲಿ ಹೋಗ್ಯಾವೊ ಆ ಕಾಲ' ಪಾಠದಿಂದ ಆಯ್ದುಕೊಳ್ಳಲಾಗಿದೆ.<br><br>ಪೊಲೀಸ್ ಕಚೇರಿಯಲ್ಲಿ ಅಜ್ಜನಿಗೆ ಅಧಿಕಾರಿ ತನ್ನ ಪರಿಚಯ ಹೇಳಿಕೊಳ್ಳುತಾನೆ. ತನ್ನ ವಿದ್ಯಾರ್ಥಿ ಎಂದು ತಿಳಿದು ಅಜ್ಜ ಅಧಿಕಾರಿಯ ಕಪಾಳಕ್ಕೆ ಪ್ರೀತಿಯಿಂದ ಹೊಡೆಯುತ್ತಾನೆ. ಈ ಸಂದರ್ಭದಲ್ಲಿ ಅಧಿಕಾರಿ ತನ್ನ ಗುರುವಿಗೆ "ಹೊಡಿರಿ ಸರ್..." ಎಂದು ಹೇಳುತ್ತಾ ಉಪಕಾರ ಸ್ಮರಣೆಯನ್ನು ಈ ಮೇಲಿನಂತೆ ಮಾಡಿಕೊಳ್ಳುವುದು ಸ್ವಾರಸ್ಯಕರವಾಗಿದೆ. | |
| 34. | "ಇತರರನ್ನು ಸುಮ್ಮನೆ ಅನುಕರಿಸುವುದು ಸರ್ವಥಾಕೂಡದು"<br><br>***ಉತ್ತರ :***<br><br>ಈ ಸಾಲನ್ನು ಬಿ. ಪುಟ್ಟಯ್ಯ ರಾಧಕೃಷ್ಣರವರ 'ಸಿ.ವಿ. ರಾಮನ್' ಎಂಬ ಕೃತಿಯಿಂದ ಆಯ್ದ 'ಶಿಷ್ಯವತ್ಸಲ ರಾಮನ್' ಪಾಠದಿಂದ ಆರಿಸಿಕೊಳ್ಳಲಾಗಿದೆ.<br><br>ರಾಮನ್‌ರವರು ಶಿಷ್ಯರನ್ನು ಆರಿಸಿಕೊಂಡ ನಂತರ ಅವರಿಗೆ ಸ್ವಾತಂತ್ರ್ಯ ನೀಡಿ ಅವರು ವಿಜ್ಞಾನದ ಅಭ್ಯಾಸಿಗಳಾಗಿ ಅತ್ಯುತ್ತಮ ಸಂಶೋಧಕರಾಗಬೇಕು. ಅನುಕರಣೆ ಕೂಡದು ಎಂದು ಬಯಸುತ್ತಿದ್ದರು. ಗುರು ಶಿಷ್ಯರಲ್ಲಿ ತಾರತಮ್ಯ ಇರಬಾರದು ಎಂದು ಶಿಷ್ಯರಿಗೆ ರಾಮನ್ ಮಾರ್ಗದರ್ಶನ ಮಾಡುವ ಸಂದರ್ಭದಲ್ಲಿ ಬಂದ ಈ ಮೇಲಿನ ಮಾತು ಸ್ವಾರಸ್ಯಕರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 35. | "ಹಮ್ಮಿನಲ್ಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು"<br>***ಉತ್ತರ :***<br>ಈ ಸಾಲನ್ನು ಸು.ರಂ. ಎಕ್ಕುಂಡಿಯವರ 'ಕಥನ ಕವನಗಳು' ಕೃತಿಯಿಂದ ಆಯ್ದ 'ನನ್ನ ಹಾಗೆಯೆ' ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಭರತನ ಶಸ್ತ್ರಾಗಾರದಲ್ಲಿ ಚಕ್ರರತ್ನ ಹುಟ್ಟುತ್ತದೆ. ಈ ಹಮ್ಮಿನಲ್ಲಿ ತಮ್ಮನಾದ ಬಾಹುಬಲಿಯ ಮೇಲೆ ದೃಷ್ಟಿಯುದ್ಧ, ಜಲಯುದ್ಧ, ಮಲ್ಲ ಯುದ್ಧ ಮಾಡಿ ಸೋಲುತ್ತಾನೆ. ಅಣ್ಣನ ಅಹಂಕಾರವನ್ನು ತಮ್ಮ ಮಣಿಸಿದ ರೀತಿಯನ್ನು ಈ ಮೇಲಿನ ಸಾಲು ಸ್ವಾರಸ್ಯಕರವಾಗಿ ಬಿಂಬಿಸುತ್ತದೆ. ಅಹಂಕಾರದಿಂದ ಮೆರೆಯುವ ವ್ಯಕ್ತಿ ಎಂದೂ ಗೆಲ್ಲಲಾರ ಎಂಬ ಸಂದೇಶವೂ ಈ ಮಾತಿನಿಂದ ತಿಳಿಯುತ್ತದೆ. | |
| 36. | "ದಾಳಿ ಬಂದೊಡನೆ ಶರಣೆಂಬ ಹೆಣ್ತನವು"<br>***ಉತ್ತರ :***<br>ಈ ಸಾಲನ್ನು ಎಂ. ಗೋಪಾಲ ಕೃಷ್ಣ ಅಡಿಗರ 'ಸಮಗ್ರ ಕಾವ್ಯ' ಕವನ ಸಂಕಲನದ ಗುರಿ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಕವಿ ಅಡಿಗರು ಪ್ರತಿಯೊಬ್ಬರೂ ಜೀವನದಲ್ಲಿ ಹೆಗ್ಗುರಿಯನ್ನು ಇಟ್ಟುಕೊಂಡಿರಬೇಕು. ಗಾಳಿಬಂದೆಡೆ ತಿರುಗುವ ಹೇಡಿತನ ಇರಬಾರದು. ಯಾವುದೇ ದಾಳಿಗೆ ಹೆದರಬಾರದು. ಅದನ್ನು ಎದುರಿಸಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಸಾಲು ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | $2 \times 4 = 8$ |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದಬಳಕೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ನನ್ನ ಗೋಪಾಲ ನಾಟಕದಲ್ಲಿ ನೀವು ಮೆಚ್ಚುವ ಪ್ರಕೃತಿ ಸೊಬಗನ್ನು ವರ್ಣಿಸಿ ಬರೆಯಿರಿ.<br>***ಅಥವಾ***<br>ನನ್ನ ಗೋಪಾಲ ನಾಟಕದಲ್ಲಿ ತಾಯಿ ಪ್ರೀತಿಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ.<br>***ಉತ್ತರ :***<br>ನನ್ನ ಗೋಪಾಲ ನಾಟಕದಲ್ಲಿ ಪ್ರಕೃತಿಯ ಸೊಬಗು ಸುಂದರವಾಗಿ ಚಿತ್ರಿತವಾಗಿದೆ. ಬೆಳಗಿನ ಜಾವ ಸೂರ್ಯನ ಕಿರಣಗಳು ತೆಂಗಿನ ಮರದ ಮೇಲೆ ಪ್ರಕಾಶಿಸುತ್ತವೆ. ಇಂಪಾದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗಾಳಿ, ಹಕ್ಕಿಗಳ ಹಾಡು, ಮಲ್ಲಿಗೆ ಹೂ, ಪರ್ವತ ಬಾಳೆ ಹೂ ಮುಂತಾದ ಹೂಗಳು ಅರಳುವುದು ಮನಸ್ಸಿಗೆ ಮುದ ನೀಡುತ್ತದೆ. ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಭಾಸವಾಗುವುದು. ಚಿಗುರು ಹುಲ್ಲು ಹಿಮಮಣಿಗಳಿಂದ ಬನವು ಸೊಗಸಾಗಿ ಕಾಣುತ್ತದೆ. ಸಂಜೆಯ ವಾತಾವರಣ, ನೇರಳೆ ಹಣ್ಣಿನ ಬಣ್ಣ, ಹೂಗಿಡಗಳ ಗೊಂಚಲಿನ ಭಾರಕ್ಕೆ ಬಾಗುವುದು, ಸೂರ್ಯದೇವನ ಹೊಂಬೆಳಕು, ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಾಂತರ ಹಿಮಮಣಿಗಳು ಮಿರುಗುವ ಲೀಲೆ! ಈ ಎಲ್ಲಾ ಅಂಶಗಳು ಮೆಚ್ಚುಗೆಯಾಗುತ್ತವೆ. ನಾಟಕದಲ್ಲಿಯ ಪ್ರಕೃತಿ ಸೊಬಗು ಮನಸೂರೆಗೊಳ್ಳುತ್ತದೆ. | |
| | ***ಅಥವಾ*** | |
| | ನನ್ನ ಗೋಪಾಲ ನಾಟಕದಲ್ಲಿ ತಾಯಿ ಪ್ರೀತಿ ಚೆನ್ನಾಗಿ ಮೂಡಿಬಂದಿದೆ. ಗೋಪಾಲನ ತಾಯಿ ತನಗೆ ಎಷ್ಟೇ ಬಡತನವಿದ್ದರೂ ಮಗನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ತನ್ನ ಬಡತನ ಮಗನ ಅರಿವಿಗೆ ಬಾರದಂತೆ ತಾನೇ ಶ್ರಮವಹಿಸುತ್ತಾಳೆ. ಮಗ ಹೊಸ ಪಂಚೆ ಕೇಳಿದಾಗ ಹಗಲಿರುಳೂ ನೂತು ಮಗನಿಗೆ ನೀಡಿ ಸಂತಸಪಡುತ್ತಾಳೆ. ಮಗನ ಹಣೆಗೆ ತಿಲಕವನ್ನಿಟ್ಟು ಕಳಿಸಿಕೊಡುತ್ತಾಳೆ. ಮಗ ಸಂಜೆ ಶಾಲೆಯಿಂದ ಬರುವಾಗ ಹೆದರಿಕೆಯಾಗುತ್ತದೆ ಎಂದು ಹೇಳಿದಾಗ ಅಣ್ಣನನ್ನು ಕರೆ, ಬರುತ್ತಾನೆ ಎಂದು ಹೇಳಿ ಧೈರ್ಯ ತುಂಬುತ್ತಾಳ. ದೈವಭಕ್ತಿಯನ್ನೂ ಮಗನಲ್ಲಿ ಬೆಳೆಸುತ್ತಾಳೆ. ತನಗೆ ಬಡತನವಿದ್ದರೂ ಮಗನ ಶಿಕ್ಷಣಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವ ತಾಯಿ ಪ್ರೀತಿ ಮೆಚ್ಚುಗೆಯಾಗುತ್ತದೆ. ಪ್ರತಿಫಲ ಅಪೇಕ್ಷೆ ಇಲ್ಲದೆ ತಾಯಿ ಮಗನಿಗೆ ಬೆನ್ನೆಲುಬಾಗಿ ನಿಲ್ಲುತ್ತಾಳೆ. ತಾಯಿ ಪ್ರೀತಿಯ ಈ ಅಂಶಗಳು ಮನಮುಟ್ಟುತ್ತವೆ. | |
| 38. | ಅರ್ಜುನ ಮತ್ತು ಉತ್ತರಕುಮಾರ ಇವರ ಗುಣಸ್ವಭಾವದಲ್ಲಿಯ ವ್ಯತ್ಯಾಸವನ್ನು ಬರೆಯಿರಿ. | |
| | ***ಅಥವಾ*** | |
| | ಅರ್ಜುನ ಮತ್ತು ಉತ್ತರಕುಮಾರ ಇವರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ಅರ್ಜುನ ಪರಾಕ್ರಮಿ ಹಾಗೂ ಧೈರ್ಯವಂತನಾಗಿದ್ದನು. ಉತ್ತರಕುಮಾರನದು ಅರ್ಜುನನಿಗೆ ವಿರುದ್ಧವಾದ ಸ್ವಭಾವವಾಗಿತ್ತು. ಈತ ಅಂಜುಬುರುಕ ಹಾಗೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೇಡಿಯಾಗಿದ್ದನು. ವಿರಾಟನ ಗೋವುಗಳನ್ನು ಕೌರವರು ಅಪಹರಿಸಿರುತ್ತಾರೆ. ಅರ್ಜುನ ಬೃಹನ್ನಳೆಯ ವೇಷದಲ್ಲಿರುತ್ತಾನೆ. ಉತ್ತರ ಹೆಂಗಳೆಯರ ಎದುರು ತಾನು ಪರಾಕ್ರಮಿ ಎಂದು ಜಂಬ ಕೊಚ್ಚಿಕೊಳ್ಳುತ್ತಿರುತ್ತಾನೆ. ಆದರೆ ಅರ್ಜುನ ತನ್ನ ಬಗ್ಗೆ ಕೊಚ್ಚಿಕೊಳ್ಳದೆ ಉತ್ತರನ ಸಾರಥಿಯಾಗಿ ಯುದ್ಧ ಭೂಮಿಗೆ ರಥದಲ್ಲಿ ಬಂದಾಗ ಸೈನ್ಯವನ್ನು ನೋಡಿ ಎದೆಗುಂದುವುದಿಲ್ಲ. ಉತ್ತರ ಸೈನ್ಯವನ್ನು ನೋಡಿ ಹೆದರಿ ಓಡಿಹೋಗಲು ಪ್ರಯತ್ನಿಸುತ್ತಾನೆ. ಉತ್ತರನ ಸ್ಥಿತಿ ನಗೆಪಾಟಲಾಗುತ್ತದೆ. ಅಪಹಾಸ್ಯಕ್ಕೆ ಗುರಿಯಾಗುತ್ತಾನೆ. ಅರ್ಜುನ ಧೈರ್ಯದಿಂದ ಮುನ್ನುಗ್ಗಿ ಉತ್ತರನನ್ನೂ ಬಿಡದೆ ರಥದಲ್ಲಿ ಕರೆತಂದು ನಿಲ್ಲಿಸಿ ಪರಾಕ್ರಮಿ ಎನಿಸಿಕೊಳ್ಳುತ್ತಾನೆ ಹೀಗೆ ಉತ್ತರಕುಮಾರ ಮತ್ತು ಅರ್ಜುನರ ಗುಣಸ್ವಭಾವದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. | |
| | ***ಅಥವಾ*** | |
| | ವಿರಾಟ ರಾಜನ ಗೋವುಗಳನ್ನು ಕೌರವರು ಅಪಹರಿಸಿರುತ್ತಾರೆ. ಉತ್ತರನ ಸಾಂಥಿಯಾಗಿ ಅರ್ಜುನ ನೇಮಿಸಲ್ಪಡುತ್ತಾನೆ. ಇಬ್ಬರೂ ರಥದಲ್ಲಿ ಯುದ್ಧಭೂಮಿಗೆ ಬರುತ್ತಾರೆ. ಭಯಂಕರ ಸೈನ್ಯವನ್ನು ನೋಡಿ ಉತ್ತರ “ಈ ಸೈನ್ಯದೊಡನೆ ಯುದ್ಧಮಾಡಿ ಗೆಲ್ಲಲು ಶಿವನಿಂದಲೂ ಸಾಧ್ಯವಿಲ್ಲ. ಆದ್ದರಿಂದ ಯುದ್ಧ ಅಸಾಧ್ಯ”ವೆನ್ನುತ್ತಾನೆ. ಇದನ್ನು ಕೇಳಿ ಅರ್ಜುನ ರಥವನ್ನು ಇನ್ನಷ್ಟು ಮುನ್ನಡೆಸುತ್ತಾನೆ. ಆಗ ಬಿಟ್ಟಮಂಡೆಯಲಿ ರಥದಿಂದ ಜಿಗಿದು ಓಡುತ್ತಿರುವ ಉತ್ತರಕುಮಾನಿಗೆ ಅರ್ಜುನ ನಗುತ್ತ, “ಸಭೆಯಲ್ಲಿ ಹೆಂಗಸರ ಮುಂದೆ ಬಾಯಿಗೆ ಬಂದಂತೆ ಕೊಚ್ಚಿಕೊಳ್ಳುತ್ತಿದ್ದೆ. ಯುದ್ಧ ಭೂಮಿಯಲ್ಲಿ ವೈರಿ ಸೈನ್ಯದ ಎದುರು ನಿನ್ನ ಪೌರುಷ ಎಲ್ಲಿ ಹೋಯಿತು. ನಾಡನರಿಯಂತೆ ಓಡಬೇಡ, ನೀನು ಹಲ್ಲುಗಿಂಜಿದರೆ ಬಿಡುವೆನೆ” ಎನ್ನುತ್ತಾನೆ. “ಪಾಪವನ್ನು ಆಶ್ವಮೇಧಯಾಗ ಮಾಡಿ ಕಳೆದುಕೊಳ್ಳಬಹುದು. ಸುರಸತಿಯರು ಬೇಡ. ನಮ್ಮ ಅರಮನೆಯ ನಾರಿಯರೇ ಸಾಕು. ಇಂದ್ರ ಪದವಿ ಬೇಡ ನಮಗಿರುವ ಅರಸುತನವೇ ಸಾಕು” ಎಂದು ಉತ್ತರಕುಮಾರ ಅರ್ಜುನನಿಗೆ ಹೇಳುತ್ತಾನೆ. ಇದು ಅರ್ಜುನ ಮತ್ತು ಉತ್ತರಕುಮಾರರ ನಡುವೆ ನಡೆದ ಸಂಭಾಷಣೆಯ ಸಾರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 39. | 'ಏಕೈಕ' ಪದವು ಈ ಸಂಧಿಗೆ ಉದಾಹರಣೆಯಾಗಿದೆ | |
| | (ಎ) ವೃದ್ಧಿ ಸಂಧಿ (ಬಿ) ಗುಣ ಸಂಧಿ | |
| | (ಸಿ) ಯಣ್ ಸಂಧಿ (ಡಿ) ಸವರ್ಣದೀರ್ಘ ಸಂಧಿ | |
| | ***ಉತ್ತರ :*** (ಎ) ವೃದ್ಧಿ ಸಂಧಿ | |
| 40. | ತದ್ಭವ ರೂಪದಲ್ಲಿರುವ ಪದ | |
| | (ಎ) ಅಚ್ಚರಿ (ಬಿ) ವರ್ಣನೆ | |
| | (ಸಿ) ಸಂಸ್ಕೃತ (ಡಿ) ಸ್ಥಾನ | |
| | ***ಉತ್ತರ :*** (ಎ) ಅಚ್ಚರಿ | |
| 41. | 'ಬಾನ' ಪದದ ಅರ್ಥ | |
| | (ಎ) ಅರಿವು (ಬಿ) ಆಚಾರ | |
| | (ಸಿ) ಅನ್ನ (ಡಿ) ಆಕಾರ | |
| | ***ಉತ್ತರ :*** (ಸಿ) ಅನ್ನ | |
| 42. | 'ಮನೆಯಿಂದ' ಪದದಲ್ಲಿರುವ ವಿಭಕ್ತಿ | |
| | (ಎ) ತೃತೀಯಾ (ಬಿ) ಪ್ರಥಮಾ | |
| | (ಸಿ) ದ್ವಿತೀಯಾ (ಡಿ) ಸಪ್ತಮೀ | |
| | ***ಉತ್ತರ :*** (ಎ) ತೃತೀಯಾ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 43. | 'ಸಹನೆ' ಪದದ ವಿರುದ್ಧಾರ್ಥಕ<br>(ಎ) ಸಹಜ (ಬಿ) ಸಹಕಾರ<br>(ಸಿ) ಅಸಹನೆ (ಡಿ) ಸಹಾಯ<br>***ಉತ್ತರ :*** (ಸಿ) ಅಸಹನೆ | |
| 44. | ಗ್ರಾಂಥಿಕ ರೂಪದಲ್ಲಿರುವ ಪದ<br>(ಎ) ಭೆಟ್ಟಿಆಗ್ರಿ (ಬಿ) ಮನುಷ್ಯ<br>(ಸಿ) ತಪ್ಪಾತರೀ (ಡಿ) ಮನ್ಯಾಗಿದ್ದು<br>***ಉತ್ತರ :*** (ಬಿ) ಮನುಷ್ಯ | |
| 45. | 'ಮುಖಚಂದ್ರ' ಇಲ್ಲಿರುವ ಅಲಂಕಾರ<br>(ಎ) ಉಪಮಾಲಂಕಾರ (ಬಿ) ದೃಷ್ಟಾಂತಾಲಂಕಾರ<br>(ಸಿ) ಉತ್ಪ್ರೇಕ್ಷಾಲಂಕಾರ (ಡಿ) ರೂಪಕಾಲಂಕಾರ<br>***ಉತ್ತರ :*** (ಡಿ) ರೂಪಕಾಲಂಕಾರ | |
| 46. | 'ಬನ್ನಿ ಬನ್ನಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ<br>(ಎ) ಜೋಡಿಪದ (ಬಿ) ಗುಣವಾಚಕ<br>(ಸಿ) ದ್ವಿರುಕ್ತಿ (ಡಿ) ಅನುಕರಣಾವ್ಯಯ<br>***ಉತ್ತರ :*** (ಸಿ) ದ್ವಿರುಕ್ತಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | ನಾಲ್ಕು ಸಾಲಿನ ಪದ್ಯಕ್ಕೆ ಹೀಗೆನ್ನುತ್ತಾರೆ<br>(ಎ) ಷಟ್ಪದಿ (ಬಿ) ಚೌಪದಿ<br>(ಸಿ) ದ್ವಿಪದಿ (ಡಿ) ತ್ರಿಪದಿ<br>***ಉತ್ತರ :*** (ಬಿ) ಚೌಪದಿ | |
| 48. | 'ಅಂಗಾಲು' ಈ ಸಮಾಸಕ್ಕೆ ಉದಾಹರಣೆ<br>(ಎ) ದ್ವಿಗು ಸಮಾಸ (ಬಿ) ಅಂಶಿ ಸಮಾಸ<br>(ಸಿ) ತತ್ಪುರುಷ ಸಮಾಸ (ಡಿ) ಕ್ರಿಯಾ ಸಮಾಸ<br>***ಉತ್ತರ :*** (ಬಿ) ಅಂಶಿ ಸಮಾಸ | |
| 49. | 'ಸರ್ವನಾಮ' ಪದಕ್ಕೆ ಉದಾಹರಣೆ<br>(ಎ) ಅಶೋಕ (ಬಿ) ಅರಸ<br>(ಸಿ) ಅಂಜಲಿ (ಡಿ) ಅವರು<br>***ಉತ್ತರ :*** (ಡಿ) ಅವರು | |
| 50. | ಭೂತಕಾಲದಲ್ಲಿರುವ ಕ್ರಿಯಾಪದ<br>(ಎ) ಬರುವನು (ಬಿ) ಬರುತ್ತಾನೆ<br>(ಸಿ) ಬರಲು (ಡಿ) ಬಂದನು<br>***ಉತ್ತರ :*** (ಡಿ) ಬಂದನು | |
| | **ವಿಭಾಗ – 'ಸಿ'**<br>**ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)<br>ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುದುಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನ. ಇಂಥ ಅಮೂಲ್ಯವಾದ ಆ ಭಾಷೆಯ ಉತ್ಪತ್ತಿ ಎಂದು, ಹೇಗಾಯಿತು ಎಂಬ ಪ್ರಶ್ನೆಗೆ ಸರಿಯಾದ ಉತ್ತರ ಹೇಳುವುದು ಕಷ್ಟಸಾಧ್ಯ. | 4 × 1 = 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಭಾಷೆಯ ಮೂಲವನ್ನು ಮಾನವ ಕಂಡುಹಿಡಿಯುವುದೆಂದರೆ, ನಿರೀಕ್ಷಕನೂ ನಿರೀಕ್ಷಣೆಯ ವಸ್ತುವೂ ಒಂದೇ ಆದಂತೆಯೇ ಸರಿ. ಮಾನವನು ತನ್ನ ವಿಶಿಷ್ಟ ಮೇಧಾಶಕ್ತಿಯಿಂದ ಜಂಗಮ ಜಗತ್ತಿನ ಇತರ ಜಂತುಗಳಿಗಿಂತ ಭಿನ್ನವಾಗಿದ್ದಾನೆ.<br>ಮಕ್ಕಳಿಗೆ ಮೊಲೆಯುಡುವ ಎಲ್ಲಾ ಪ್ರಾಣಿಗಳು ಚಲನವಲನಗಳ ವಿಷಯವಾಗಿ ಆಹಾರ ವಿಚಾರಗಳ ವಿಚಾರವಾಗಿ ತಮ್ಮ ಮಕ್ಕಳಿಗೆ ಸಹಜವಾಗಿ ತರಪೇತು ಕೊಡುವುದನ್ನು ಕಾಣುತ್ತೇವೆ. ಆನುಕರಣದಿಂದ ಕಿರಿಯವು ಹಿರಿಯ ಪ್ರಾಣಿಗಳಂತೆ ಕಾರ್ಯ ಮಾಡುವುದನ್ನು ಕಲಿಯುತ್ತವೆ. ಇಲ್ಲಿಗೆ ಅವುಗಳ ಸಾಮಾನ್ಯ ಸಂಸ್ಕೃತಿ ಮುಗಿಯಿತು. ಮಾನವನಾದರೋ ತನ್ನ ಸಮಕಾಲೀನ ಜನತೆಯದು ಮಾತ್ರವೇ ಅಲ್ಲ ಗತಕಾಲದ ಹಿರಿಯರ ಜ್ಞಾನಾನುಭವಗಳ ಸಾರ ಸರ್ವಸ್ವವನ್ನು ಉಳಿಸಿಕೊಂಡು ಬೆಳೆಸಬಲ್ಲ. ಇದಕ್ಕೆ ಸಾಧನ ಭಾಷೆ. ಭಾಷೆಯ ಪ್ರಯೋಜನ ಮನುಷ್ಯನಿಗೆ ಇಲ್ಲದೆ ಹೋಗಿದ್ದರೆ ಆತ ಬರಿಯ ಜಂತುವಾಗಿಯೇ ಉಳಿಯುತ್ತಿದ್ದ. | |
| 51. | ಮಾನವನು ಜಂಗಮ ಜಗತ್ತಿನ ಇತರ ಜಂತುಗಳಿಗಿಂತ ಹೇಗೆ ಭಿನ್ನವಾಗಿದ್ದಾನೆ ?<br>***ಉತ್ತರ :***<br>ಮಾನವನು ಜಂಗಮ ಜಗತ್ತಿನ ಇತರ ಜಂತುಗಳಿಗಿಂತ ತನ್ನ ವಿಶಿಷ್ಟ ಮೇಧಾಶಕ್ತಿಯಿಂದ ಭಿನ್ನವಾಗಿದ್ದಾನೆ. | |
| 52. | ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ಯಾವ ವಿಷಯವಾಗಿ ತರಪೇತು ನೀಡುತ್ತವೆ ?<br>***ಉತ್ತರ :***<br>ಪ್ರಾಣಿಗಳು ತಮ್ಮ ಮಕ್ಕಳಿಗೆ ಚಲನವಲನಗಳ ವಿಷಯವಾಗಿ ಆಹಾರ ವಿಚಾರವಾಗಿ ತರಪೇತು ನೀಡುತ್ತವೆ ? | |
| 53. | ಭಾಷೆಯು ಯಾವುದಕ್ಕೆ ಅಮೂಲ್ಯ ಸಾಧನವಾಗಿದೆ ?<br>***ಉತ್ತರ :***<br>ಭಾಷೆ ತನ್ನ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಒಂದು ಅಮೂಲ್ಯ ಸಾಧನವಾಗಿದೆ. | |
| 54. | ಭಾಷೆಯ ಮೂಲಕ ಏನನ್ನು ಉಳಿಸಿಕೊಂಡು ಬೆಳೆಸಬಹುದಾಗಿದೆ ?<br>***ಉತ್ತರ :***<br>ಭಾಷೆಯ ಮೂಲಕ ಗತಕಾಲದ ಹಿರಿಯರ ಜ್ಞಾನಾನುಭವಗಳ ಸಾರಸರ್ವಸ್ವವನ್ನು ಉಳಿಸಿಕೊಂಡು ಬೆಳೆಸಬಹುದಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | * ಆಳಾಗಿ ದುಡಿಯಬಲ್ಲವ ಅರಸಾಗಿ ಆಳಬಲ್ಲ | |
| | * ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ | |
| | * ಎತ್ತಿಗೆ ಜ್ವರ ಎಮ್ಮೆಗೆ ಬರೆ | |
| | ***ಉತ್ತರ :*** | |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 56. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಾತ್ವಿಕ್' ಎಂದು ಭಾವಿಸಿಕೊಂಡು, ವ್ಯಾಸಂಗ ದೃಢೀಕರಣ ಪತ್ರ ಕೊಡುವಂತೆ ಕೋರಿ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಮೈಸೂರಿನ 'ಪಲ್ಲವಿ' ಎಂದು ಭಾವಿಸಿಕೊಂಡು, ಶಾಲಾ ಪ್ರವಾಸದ ಅನುಭವಗಳನ್ನು ವಿವರಿಸಿ ರಾಯಚೂರಿನಲ್ಲಿ ವಾಸವಾಗಿರುವ ಶಿವಪ್ಪ ಎಂಬ ಹೆಸರಿನ ತಂದೆಗೆ ಒಂದು ಪತ್ರ ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ∗ ಸ್ವಚ್ಛತಾ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ | |
| | ∗ ಮೊಬೈಲ್ ಬಳಕೆಯ ಪ್ರಯೋಜನಗಳು | |
| | ∗ ಗ್ರಂಥಾಲಯಗಳ ಬಳಕೆ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |